ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕೆರೆ ದಂಡೆ ಬಿರುಕು ಬಿಟ್ಟಿಲ್ಲ, ಆದರೆ ಆದರೆ ಆಸರೆ ಗೋಡೆಯ ಒಂದು ಭಾಗದಲ್ಲಿ ಕುಸಿದಿದೆ.

ಆ) ತಾತ್ಕಾಲಿಕ ದುರಸ್ತಿ ಮಾಡಲಾಗಿದೆ. ಶಾಶ್ವತ ದುರಸ್ತಿ ಮಾಡಲು ೩.೬೦ ಲಕ್ಷ ರೂ.ಗಳ ಅಂದಾಜು ವೆಚ್ಚಕ್ಕೆ ಮಂಜೂರಾತಿ ದೊರೆತಿದ್ದು ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಮೈಸೂರು ದಸರಾ ಪ್ರದರ್ಶನ ಬಗ್ಗೆ

೨೦೬. ಶ್ರೀ ಜಿ. ರಾಜುಗೌಡ (ಹನೂರು).—ಪಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಕ್ಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷ ಮೈಸೂರು ದಸರಾ ವಸ್ತು ಪ್ರದರ್ಶನ ಎಷ್ಟು ದಿನಗಳ ಕಾಲ ನಡೆಯಿತು ? ಇದರ ಒಟ್ಟು ಆದಾಯವೆಷ್ಟು ? ಇದನ್ನು ಎಷ್ಟು ಜನ ವೀಕ್ಷಿಸಿದ್ದಾರೆ ? ಇದರಿಂದ ಎಷ್ಟು ಜನಗಳಿಗೆ ಕೆಲಸ ಒದಗಿಸಲಾಯಿತು ?

ಆ) ಸರ್ಕಾರದಿಂದ ಇದಕ್ಕೆ ಎಷ್ಟು ಹಣ ಒದಗಿಸಲಾಗಿದೆ ?

ಶ್ರೀ ಎಂ.ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಕ್ಕ ಮಂತ್ರಿಗಳು).—

ಅ) ೧೯೮೮ರ ದಸರಾ ಪಸ್ತು ಪ್ರದರ್ಶನವು ದಿನಾಂಕ ೧೧-೧೦-೮೮ ರಿಂದ ೫-೧೨-೧೯೮೮ರ ವರೆಗೆ ಒಟ್ಟು ೫೬ ದಿನಗಳ ಕಾಲ ನಡೆಯಿತು ಹಾಗೂ ಇದರ ಒಟ್ಟು ಆದಾಯ ರೂ. ೩೬.೫ ಲಕ್ಷ. ಸುಮಾರು ೧೧.೮ ಲಕ್ಷ ಜನರು ಇದನ್ನು ವೀಕ್ಷಿಸಿದ್ದಾರೆ. ಸುಮಾರು ೧೮೦ ಜನರಿಗೆ ಎರಡು ತಿಂಗಳ ಕಾಲ ಕೆಲಸ ಒದಗಿಸಲಾಗಿತ್ತು.

ಆ) ರೂ. ೩೧.೫ ಲಕ್ಷ ರೂ. ಅನುದಾನ ನೀಡಲಾಗಿದೆ.

ತರೀಕೆರೆ ತಾಲ್ಲೂಕಿನ ಜಂಬದಹಳ್ಳ ಜಲಾಶಯದ ಬಗ್ಗೆ

೨೫೦. ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕು ಜಂಬದಹಳ್ಳ ಜಲಾಶಯಕ್ಕೆ ಹೋದಿರುವಿನ ಹಳ್ಳಿಂದ ನೀರನ್ನು ಒದಗಿಸಲು ಸರ್ಕಾರದವರಲ್ಲಿ ಯೋಜನೆ ಏನಾದರೂ ಇದೆಯೆ,

ಆ) ಈ ಯೋಜನೆಗಾಗಿ ಅರಣ್ಯ ಇಲಾಖೆಯಿಂದ ಸುಮಾರು ೫ ಹೆಕ್ಟೇರು ಜಮೀನನ್ನು ಇಲಾಖೆಯು ಕೇಳಿದೆಯೆ,

ಇ) ಈ ಜಮೀನನ್ನು ಯಾವಾಗ ಪಡೆಯಲಾಗಿರಿ ಹಾಗೂ ಎಷ್ಟು ಸಮಯ ಬೇಕಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು) —

ಅ) ಹೌದು.

ಆ) ಅರಣ್ಯ ಇಲಾಖೆಯಿಂದ ೧೪–೫೦ ಹೆಕ್ಟೇರು ಅರಣ್ಯ ಜಮೀನನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಇ) ಅದಷ್ಟು ಜಾಗ್ರತೆ ಕ್ರಮ ಕೈಗೊಳ್ಳಲಾಗುವುದು.